IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಭಾರತದ ಸಹಕಾರಾತ್ಮಕ ಸಂಯುಕ್ತ ವ್ಯವಸ್ಥೆಯ ಕಾರ್ಯಾಚರಣೆ

ಯಲ್ಲಪ್ಪ ಹ. ಭಜಂತ್ರಿ

ಸಂಶೋಧನಾ ವಿದ್ಯಾರ್ಥಿ

ಮಾರ್ಗದರ್ಶಕರು,

ಡಾ. ಎಂ.ಜಿ.ಖಾನ್

ನಿವೃತ್ತ ಪ್ರಾಧ್ಯಾಪಕರು

ಸರ್ಕಾರದ ವಿವಿಧ ಹಂತಗಳ ನಡುವೆ ಸಂಘಟನೆಯ ತತ್ವವಾಗಿ ಒಕ್ಕೂಟ ವ್ಯವಸ್ಥೆಯ ಪರಿಕಲ್ಪನೆ ಅನಾದಿಕಾಲದಿಂದಲು ಅಂತರ್ಗತವಾಗಿದೆ. ಹಿಂದೆ ಗ್ರೀಕ್ ನಗರ ಆಡಳಿತದಲ್ಲಿ ಈ ವ್ಯವಸ್ಥೆ ಇತ್ತು ಕ್ರಿ.ಪೂ. ಆರನೇ ಶತಮಾನದಲ್ಲಿ ಮೆರೆದ ಉತ್ತರಭಾರತದ ಲಿಚ್ಛವಿ ಸಾಮ್ರಾಜ್ಯ ವೈಭವೋಪೇತ ಒಕ್ಕೂಟ ಗಣತಂತ್ರ ವ್ಯವಸ್ಥೆಯ ಸಶಕ್ತ ಉದಾಹರಣೆಯಾಗಿದೆ. ಆಧುನಿಕ ಜಗತ್ತಿನಲ್ಲಿ ಅಮೇರಿಕ, ಬ್ರೆಜಿಲ್, ಮೆಕ್ಸಿಕೊ ಭಾರತಗಳಂತಹ ದೊಡ್ಡ ದೇಶಗಳಲ್ಲಿ ಸಂಯುಕ್ತ / ಒಕ್ಕೂಟ ವ್ಯವಸ್ಥೆ ಅತಿ ಜನಪ್ರಿಯವಾಗಿ ಮುಂದುವರೆದಿದೆ. ಇದಕ್ಕೆ ಆರ್ಥಿಕ ವರ್ತುಲದಲ್ಲಿ ರಾಷ್ಟ್ರ-ರಾಷ್ಟ್ರಗಳ ನಡುವೆ ಲಾಭ ಪಡೆಯಲು ರಚಿಸಿಕೊಳ್ಳಲಾದ ಐರೋಪ್ಯ ಸಮುದಾಯ ಇತ್ತೀಚಿನ ಅತ್ಯುತ್ತಮ ಮಾದರಿಯಾಗಿದೆ.

ವಿಶ್ವದಾದ್ಯಂತ ಒಕ್ಕೂಟ ವ್ಯವಸ್ಥೆ ಕಂಡು ಬಂದರೂ ಅದು ಒಂದೇ ಪ್ರಕಾರಕ್ಕೆ ಸೀಮಿತಗೊಂಡಿಲ್ಲ ರಾಜ್ಯಶಾಸ್ತ್ರದ ಚಿಂತಕರಾದ ಮಾಂಟೆಸ್ಕೋರವರು ಸಾರ್ವಭೌಮ ನಗರಗಳಿಂದಾದ ಗಣತಂತ್ರ ಒಕ್ಕೂಟದ ಬಗ್ಗೆ ಹೇಳಿದರೆ, ಸಂಕುಚಿತ ಸ್ಥಳೀಯ ಹಿತಾಸಕ್ತಿಯನ್ನು ತೊಡೆದುಹಾಕುವ, ಬಲಾಢ್ಯ ಕೇಂದ್ರ ಸರ್ಕಾರವಿರುವ ಸಂಯುಕ್ತ ಗಣತಂತ್ರದ ಬಗ್ಗೆ ಜೇಮ್ಸ್ ಮ್ಯಾಡಿಸನ್‌ರಂತಹ ಒಕ್ಕೂಟವಾದಿಗಳು ಗಮನ ಹರಿಸಿದ್ದಾರೆ. ಡಾ॥ ಬಾಬಾಸಾಹೇಬ ಅಂಬೇಡ್ಕರ್ ಅವರು ಭಾರತದಂತಹ ಬಹು ಸಾಂಸ್ಕೃತಿಕ, ಬಹು ಜನಾಂಗೀಯ ಬಹು ಭಾಷೆಗಳ ಅನೇಕತೆಯ ದೇಶಕ್ಕೆ ಒಕ್ಕೂಟ ವ್ಯವಸ್ಥೆ ಮುಖ್ಯವೆಂದು ನಂಬಿದ್ದರು. ಪಂಡಿತ್ ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್ ಹಾಗೂ ಇನ್ನಿತರ ಧುರೀಣರು ಇದನ್ನೇ ಬೆಂಬಲಿಸಿದರು.

ರಾಜ್ಯಶಾಸ್ತ್ರ ವಿವೇಚಕರಾದ ಟೊಕ್‌ವಿಲ್ಲೆ ಹೇಳಿದಂತೆ ಸಹಕಾರಿ ಒಕ್ಕೂಟ ಅನುಸರಣೆಯಿಂದ ರಾಜ್ಯ ಸರಕಾರಗಳು ಕೇಂದ್ರಕ್ಕೆ ಹೋಲಿಸಿದ್ದಲ್ಲಿ ಗಾತ್ರದಲ್ಲಿ ಚಿಕ್ಕದಾಗಿರುವ ಮತ್ತು ಪ್ರಾದೇಶಿಕ ಹಿತಾಸಕ್ತಿ ಅವಲಂಬಿಸಿ ಹೆಚ್ಚಿನ-ವಿಭಿನ್ನ ಲಾಭ ಪಡೆದುಕೊಳ್ಳಬಹುದಾಗಿದೆ.

ಸ್ಪರ್ಧಾತ್ಮಕ ಒಕ್ಕೂಟ ವ್ಯವಸ್ಥೆಯಲ್ಲಿ ಪ್ರಾದೇಶಿಕ ರಾಜ್ಯ ಸರ್ಕಾರಗಳು ತಮ್ಮ ಪ್ರಗತಿಗಾಗಿ ಬೇರೆ ದೇಶಗಳಿಂದ ಆಧುನಿಕ ತಂತ್ರಜ್ಞಾನ ಮತ್ತು ಬಂಡವಾಳ ಹೂಡಿಕೆ ಆಕರ್ಷಿಸಲು ಕೇಂದ್ರ ಸರ್ಕಾರದೊಂದಿಗೆ ಸ್ಪರ್ಧಿಸುತ್ತಿರುವ

ವಿದ್ಯಮಾನಗಳು ಗೋಚರವಾಗಿವೆ. ಭಾರತ ಕ್ರಮೇಣವಾಗಿ ಸಹಕಾರಿ ಒಕ್ಕೂಟದತ್ತ ಮುನ್ನಡೆಯುತ್ತಿದ್ದು, ನೀತಿ ನಿರ್ವಹಣೆಯತ್ತ ಕೇಂದ್ರ ಸರಕಾರ ಗಮನ ಹರಿಸಿದೆ.

ಭಾರತದಲ್ಲಿ ಭಾಷೆ, ಸಂಸ್ಕೃತಿ, ಜನ, ಧರ್ಮ ವೈವಿಧ್ಯಕ್ಕೆ ಸಲ್ಲುವ ಪರಸ್ಪರ ಗೌರವಾದರಗಳೇ ಸದೃಢ ಒಕ್ಕೂಟ / ಸಂಯುಕ್ತ ವ್ಯವಸ್ಥೆಯ ಮೂಲ ಆಧಾರಗಳಾಗಿವೆ. ಅದೇ ಶಕ್ತಿ ಭಾರತವನ್ನು ಮುನ್ನಡೆಸುತ್ತದೆ.

## ಒಕ್ಕೂಟ ಮತ್ತು ರಾಜ್ಯಗಳ ಸಂಬಂಧ

ನಮ್ಮ ದೇಶಕ್ಕೆ ಒಕ್ಕೂಟ ವ್ಯವಸ್ಥೆ (ಸಂಯುಕ್ತ ಮಾದರಿಯ) ಯ ಸೂಚನೆಯ ತಳಹದಿಯೇ ಜೀವಾಳ ಈ ದೇಶದಲ್ಲಿರುವ ರಾಜ್ಯಗಳು ತಮ್ಮ ವೈವಿಧ್ಯತೆಗಳನ್ನು ಉಳಿಸಿಕೊಳ್ಳಲು ಹಾಗೂ ಆ ರಾಜ್ಯಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಒಕ್ಕೂಟದ ಅಧೀನವಾಗಿ ಬಾಳಬೇಕು. ಅಂದರೆ ರಾಜ್ಯಗಳು ತಮ್ಮ ಭಾಷೆ, ಲಿಪಿ, ಧರ್ಮ, ಸಂಸ್ಕೃತಿ ಇವುಗಳಿಗೆ ಮುಕ್ತ ಅವಕಾಶ ಒದಗಿಸಬೇಕು. ಕೇಂದ್ರ ಒಕ್ಕೂಟ, ರಾಜ್ಯವ್ಯವಸ್ಥೆ ರಾಜ್ಯಗಳಿಗೆ ಸ್ವಾಯತ್ತತೆಯನ್ನು ಕೊಟ್ಟು ತನ್ನ ಪರಮಾಧಿಕಾರ ಸ್ಥಾಪಿಸಬೇಕು. ಈ ದೇಶದ ರಾಜ್ಯಾಡಳಿತ ಕೇಂದ್ರ ಸರ್ಕಾರದ ಪರಮಾಧಿಕಾರವನ್ನು ಉಳಿಸಿಕೊಂಡು ರಾಜ್ಯಗಳಿಗೆ ತಮ್ಮ ವೈಶಿಷ್ಟ್ಯಗಳಿಗೆ ತಕ್ಕಂತೆ ಸೀಮಿತ ಸ್ವತಂತ್ರ ಆಡಳಿತೆಯೂ ಇರಬೇಕು.

ಸಂವಿಧಾನವು ಕೇಂದ್ರ ಮತ್ತು ರಾಜ್ಯಗಳಿಗೆ ಸಂವಿಧಾನದ ೭ನೇ ಅನುಸೂಚಿಯಲ್ಲಿ ಕೇಂದ್ರಪಟ್ಟಿ, ರಾಜ್ಯಪಟ್ಟಿಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿಸಲಾಗಿದೆ. ಕೇಂದ್ರ ಪಟ್ಟಿಯಲ್ಲಿರುವ ವಿಷಯಗಳ ಮೇಲೆ ರಾಜ್ಯ ಸರ್ಕಾರಗಳು ಯಾವ ಶಾಸನಗಳನ್ನು ಮಡುವಂತಿಲ್ಲ. ರಾಜ್ಯ ಪಟ್ಟಿಯಲ್ಲಿ ರಾಜ್ಯಗಳು ಯಾವ ಯಾವ ವಿಷಯಗಳಲ್ಲಿ ಶಾಸನವನ್ನು ರಚಿಸಿಕೊಳ್ಳಬಹುದು ಎಂಬುದನ್ನು ಪಟ್ಟಿ ಮಾಡಲಾಗಿದೆ.

೧೯೭೪ ರಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಭೂಸುಧಾರಣಾ ಕಾಯಿದೆಯನ್ನು ಜಾರಿಗೆ ತಂದ ಮೇಲೆ ಆ ಕಾಯಿದೆಯನ್ನು ಯಾವ ನ್ಯಾಯಲಯವೂ ಪ್ರಶ್ನಿಸಲಾಗದಂತೆ ೧೯೮೪ ರಲ್ಲಿ ರಾಜೀವಗಾಂಧಿ ಪ್ರಧಾನ ಮಂತ್ರಿಗಳಾಗಿದ್ದಾಗ ಸಂವಿಧಾನದ ೯ನೇ ಷೆಡ್ಯೂಲ್‌ಗೆ (ಪರಿಶಿಷ್ಟ-೯) ಸೇರಿಸಲಾಯಿತು. ಹೀಗೆ ರಾಜ್ಯ ಮತ್ತು ಒಕ್ಕೂಟ ಸರ್ಕಾರಗಳು ಒಂದು ವಿಶಿಷ್ಟ ಬಗೆಯ ಸಂವಿಧಾನವನ್ನು ರೂಪಿಸಿಕೊಂಡವು. ಅದನ್ನು ಕೇವಲ ಒಕ್ಕೂಟ ಸಂವಿಧಾನ ಎಂದು ಹೇಳಲಿಕ್ಕೆ ಬರುವುದಿಲ್ಲ. ಅಥವಾ ಅದು ಶುದ್ಧ ಸ್ವತಂತ್ರ ರಾಜ್ಯಗಳ ಒಂದು ಸಡಿಲ ಸಂವಿಧಾನವೂ ಅಲ್ಲ. ಅದನ್ನು ಸಹಕಾರಾತ್ಮಕ ಸಂಯುಕ್ತ ವ್ಯವಸ್ಥೆ (ಕೋಆಪರೇಟಿವ್ ಫೆಡರ್‍ಯಾಲಿಸಮ್) ಎಂದು ವಿಶಿಷ್ಟ ಹೆಸರಿನಿಂದ ಸಂವಿಧಾನ ತಜ್ಞರು ಕರೆದಿದ್ದಾರೆ.

## ಭಾರತದಲ್ಲಿ ಸಂಯುಕ್ತ ವ್ಯವಸ್ಥೆ

ಭಾರತದ ರಾಜಕೀಯ ಪ್ರಣಾಳಿಕೆಯಲ್ಲಿ ಸಂಯುಕ್ತ ವ್ಯವಸ್ಥೆಯು ವಿಶಿಷ್ಟ ಸ್ಥಾನ ಹೊಂದಿದೆ. ಇತ್ತ ಪೂರ್ತಿಯಾಗಿ ಏಕಾತ್ಮಕ ಸರಕಾರವೂ ಅಲ್ಲ, ಪೂರ್ತಿಯಾಗಿ ಸಂಯುಕ್ತ ಸರಕಾರವೂ ಅಲ್ಲವೆಂಬಂತೆ ಇದೊಂದು ವಿಶಿಷ್ಟದ್ವೈತ ಸರಕಾರವಾಗಿದೆ.

೧೯೧೯ ರ ಮಾಂಟೆಗೋ ಚೇಮ್ಸ್‌ಫರ್ಡ್ ಕಾಯ್ದೆಯಲ್ಲಿ ಬ್ರಿಟೀಷರು ನೀಡಿದ ಸಂವಿಧಾನದಲ್ಲಿ ಮೊದಲ ಬಾರಿಗೆ ಸಂಯುಕ್ತ ವ್ಯವಸ್ಥೆಯು ರೂಪುಗೊಂಡಿತ್ತು. ಇದನ್ನೇ ೧೯೩೫ ರ ಭಾರತ ಸರಕಾರದ ಕಾಯ್ದೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ೧೯೪೬ ರ ಡಿಸೆಂಬರ್‌ನಲ್ಲಿ ಪ್ರಪ್ರಥಮ ಬಾರಿಗೆ ಸಂವಿಧಾನ ಸಭೆಯು ನಿರ್ಣಯವೊಂದನ್ನು ಕೈಗೊಂಡಿತು. ನವಭಾರತದ ಸಂವಿಧಾನದ ಮೊದಲ ವಾಕ್ಯದಲ್ಲಿಯೇ ಫೆಡರೇಶನ್ ಶಬ್ದದ ಬದಲು ಯೂನಿಯನ್ ಆಫ್ ಸ್ಟೇಟ್ಸ್ ಎಂಬ ಪದವನ್ನು ಬಳಸಲಾಯಿತು. ಡಾ|| ಬಾಬಾಸಾಹೇಬ ಅಬೇಡ್ಕರರು ಈ ಆಯ್ಕೆಯನ್ನು ಸಮರ್ಥಿಸಿ ವಿವರಣೆ ನೀಡಿದ್ದು ಹೀಗೆ–"ಅಮೇರಿಕಾದಲ್ಲಿ ವಿವಿಧ ಸ್ವತಂತ್ರ ರಾಜ್ಯ (ಪ್ರಾಂತ್ಯ) ತಮ್ಮೆಲ್ಲರ ಸಾಮಾನ್ಯ ಏಳಿಗೆ ಹಾಗೂ ಅನುಕೂಲಕ್ಕಾಗಿ ಸಂಯುಕ್ತ ಸರಕಾರವನ್ನು ಆವಿಷ್ಕಾರ ಮಾಡಿದರು. ಅಲ್ಲಿ ರಾಜ್ಯಗಳು ಅವಿನಾಶಿ ಆದರೆ ಇಲ್ಲಿಯ ಪರಿಸ್ಥಿತಿ ಹಾಗಿಲ್ಲ. ಸ್ಥಿರತೆ ಹಾಗೂ ಭದ್ರತೆಗಳನ್ನು ಗಮನದಲ್ಲಿಟ್ಟುಕೊಂಡು ನಮ್ಮ ದೇಶದ ಐಕ್ಯ ಹಾಗೂ ಸಮಗ್ರತೆಗೆ ಚ್ಯುತಿ ಬಾರದಂತೆ ನಾವು ಒಕ್ಕೂಟ ಸರಕಾರವೊಂದನ್ನು ನಿರ್ಮಾಣ ಮಾಡುತ್ತಿದ್ದೇವೆ. ಸಾಮಾನ್ಯವಾಗಿ ಎರಡೂ ಸರಕಾರಗಳು ಸಂಯುಕ್ತ (ಫೆಡರಲ್) ಮಾದರಿಯಲ್ಲಿ ಕೆಲಸ ಮಾಡುತ್ತವೆ. ಆದರೆ ವಿಪರೀತ ಸಂದರ್ಭದಲ್ಲಿ ಏಕಾತ್ಮಕ ಸರಕಾರದ ಮಾದರಿಯಲ್ಲಿ ಕೆಲಸ ಮಾಡಬೇಕಾಗುತ್ತದೆ". (ಸಂವಿಧಾನ ಸಭೆಯಲ್ಲಿ ನವೆಂಬರ್ ೪, ೧೯೪೮)

ಸಂವಿಧಾನದಲ್ಲಿಯೇ ನಿರೂಪಿತವಾದಂತೆ ಹೊರನೋಟಕ್ಕೆ ನಮ್ಮದು ಸಂಯುಕ್ತ ವ್ಯವಸ್ಥೆಯೇ ಎನ್ನುವ ಹಾಗೆ ಈ ಅಂಶಗಳಿವೆ.

೧) ಎರಡೆರಡು ಸರಕಾರಗಳ ಅಸ್ತಿತ್ವ (ಒಂದು ಕೇಂದ್ರದಲ್ಲಿ, ಅಂಗಗಳಾಗಿ ರಾಜ್ಯಗಳಲ್ಲಿ)

೨) ದೇಶದ ಸಮಗ್ರ ರಾಜಕೀಯ ಶಕ್ತಿಗಳನ್ನು ಇವೆರೆಡೂ ಸ್ತರಗಳಲ್ಲಿಯ ಸರಕಾರಗಳ ಮಧ್ಯ ಸ್ಪಷ್ಟವಾದಂತಹ ವಿಭಜನೆ ಮಾಡಿರುವುದು.

೩) ರಾಜಸ್ವದ ಮೂಲಗಳ ವಿಭಜನೆ

೪) ರಾಜ್ಯಗಳ ಭೌಗೋಳಿಕ / ಕ್ಷೇತ್ರೀಯ ವಿಂಗಡಣೆ.

ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧಗಳನ್ನು ಬಲಪಡಿಸಲು ಹಲವಾರು ಆಯೋಗಗಳನ್ನು ರಚನೆ ಮಾಡಲಾಗಿದೆ. ಅವುಗಳೆಂದರೆ, ಇಂಟರ್ ಸ್ಟೇಟ್ ಕೌನ್ಸಿಲ್, ರಾಜಮನ್ನಾರ ಆಯೋಗ, ಕೆಂಗಲ್ ಹನುಮಂತಯ್ಯನವರ ಆಡಳಿತ ಸುಧಾರಣಾ ಆಯೋಗ, ಸರ್ಕಾರಿಯಾ ಆಯೋಗ, ನ್ಯಾಯಮೂರ್ತಿ ವೆಂಕಟಾಚಲಯ್ಯ ಕಮೀಷನ್ ಮುಖಾಂತರ ಪ್ರಯತ್ನಗಳು ನಡೆದಿವೆ.

## ಸಹಕಾರಿ ಆರ್ಥಿಕ ಒಕ್ಕೂಟ ವ್ಯವಸ್ಥೆ :

ಕೇಂದ್ರ–ರಾಜ್ಯಗಳ ವರ್ಗಾವಣೆಯಲ್ಲಿ ಸರಳತೆ, ಸಕಾಲಿಕತೆ, ಪಾರದರ್ಶಕತೆ, ನಿರ್ವಹಣೆ ಮತ್ತು ಮೌಲ್ಯಮಾಪನ ಎಲ್ಲದರಲ್ಲಿ ಸುಧಾರಣೆಯಾಗಬೇಕು. ಸಹಕಾರಿ ಸಂಯುಕ್ತ ವ್ಯವಸ್ಥೆಯ ಹಕ್ಕು ಸಾಧನೆಯಾಗಲಿ, ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಯಾವುದೇ ವ್ಯತ್ಯಾಸ ಮಾಡಲಾರದು. ಒಂದು ಸಂಯುಕ್ತ ವ್ಯವಸ್ಥೆಯಲ್ಲಿ ಶೃಂಗೀಯ ವರ್ಗಾವಣೆಗಳಿರುವುದು ಸಹಜವೇ ಆಗಿದೆ. ಕೇಂದ್ರ ಸರ್ಕಾರವು ತೆರಿಗೆಯ ಮೂಲಕ ನಿಧಿ ಸಂಗ್ರಹಿಸುವ ಅನುಕೂಲವನ್ನು ಹೊಂದಿದ್ದರೆ ರಾಜ್ಯ ಮತ್ತು ಸ್ಥಳೀಯ ಸರಕಾರಗಳು ಅನೇಕ ಬಗೆಯ ಸಾರ್ವಜನಿಕ ಸೇವೆ ಸರಕುಗಳಿಗಾಗಿ ವ್ಯಯ ಮಾಡುವ ಅನುಕೂಲಗಳನ್ನು ಹೊಂದಿವೆ.

ಆರಂಭದಲ್ಲಿ ಸಹಕಾರಿ ಆರ್ಥಿಕ ಒಕ್ಕೂಟಗಳ ಪರಿಕಲ್ಪನೆಯು (ವೆಯರ್, ೧೯೫೩) ವಿವಿಧ ಉಪರಾಷ್ಟ್ರೀಯ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶಗಳು ಪರಸ್ಪರ ಪ್ರಯೋಜನಗಳನ್ನು ಪಡೆದುಕೊಳ್ಳ ಬಹುದೆಂಬುದನ್ನು, ಅಲ್ಲದೇ ಉಪರಾಷ್ಟ್ರೀಯ ಸಹಕಾರದಿಂದ ಕೆಲಸ ಮಾಡಬಹುದೆಂಬುದಕ್ಕೆ ಪ್ರಾಧಾನ್ಯತೆ ನೀಡಿತ್ತು. ಅದೇ ರೀತಿ ರಿಕರ್ (೧೯೬೪) ಅವರು ಸಂಯುಕ್ತ ಒಕ್ಕೂಟಗಳು ಭದ್ರತೆಯನ್ನು ಮತ್ತು ಸುಸ್ಥಿರತೆಯನ್ನು ಹೆಚ್ಚಿಸುವುದಕ್ಕೆ ಇರುವ ಸಾಂವಿಧಾನಿಕ ಚೌಕಾಶಿಗಳೆಂದು ಪರಿಭಾವಿಸಿದರು.

ಮಾರುಕಟ್ಟೆಯಲ್ಲಿ ಅಸಮರ್ಥ ಸರಕಾರಿ ಹಸ್ತಕ್ಷೇಪವನ್ನು ನಿಯಂತ್ರಿಸುವುದು ಮತ್ತು ಇದನ್ನು ಸಾಧಿಸುವಲ್ಲಿ ಸಮರ್ಪಕವಾದ ಸಂಯುಕ್ತ ಸಂಸ್ಥೆಗಳು ಮುಖ್ಯವಾಗುತ್ತವೆ.

## ಒಕ್ಕೂಟ ಮತ್ತು ರಾಜ್ಯಗಳ ಶಾಸನೀಯ ಅಧಿಕಾರಗಳು :

ಕೇಂದ್ರ ಮತ್ತು ರಾಜ್ಯಗಳ ನಡುವಿನ ಶಾಸನೀಯ ಅಧಿಕಾರಗಳ ಹಂಚಿಕೆಯು ಸಂಯುಕ್ತ ಸಂವಿಧಾನದ ಪೂರ್ವಾಪೇಕ್ಷಿತವಾದ ಅವಶ್ಯಕತೆಯಾಗಿದೆ. ಭಾರತದಲ್ಲಿ ಸಂವಿಧಾನವು ಸಂಪೂರ್ಣ ಅಥವಾ ಭಾಗಕ್ಕೆ ಶಾಸನಬದ್ಧಗೊಳಿಸಲು ಸಂಸತ್ತಿಗೆ ಅಧಿಕಾರ ನೀಡುತ್ತದೆ ಮತ್ತು ಪ್ರತ್ಯೇಕ ರಾಜ್ಯಗಳ ಸಂಪೂರ್ಣ ಅಥವಾ ಭಾಗಕ್ಕೆ ಶಾಸನಬದ್ಧಗೊಳಿಸಲು ರಾಜ್ಯಗಳ ಶಾಸಕಾಂಗಗಳಿಗೆ ಅಧಿಕಾರ ನೀಡುತ್ತದೆ. "ಶಾಸಕಾಂಗ ಅಧಿಕಾರಗಳ ಹಂಚಿಕೆಯ ಯೋಜನೆಗಳಿಗೆ ಹೋಲಿಸಿದರೆ ಯು.ಎಸ್.ಎ. ಕೆನಡಾ ಮತ್ತು ಆಸ್ಟ್ರೇಲಿಯಾ ದೇಶಗಳ ಹೆಚ್ಚು ಶಾಸಕಾಂಗಕ್ಕೆ ಅಧಿಕಾರವು ವಿಶಾಲವಾಗಿದೆ.". ಕೆನಡಾ ದೇಶದ ಸರ್ಕಾರದಲ್ಲಿ ಯಾವುದೇ ಒಪ್ಪಂದವನ್ನು ಜಾರಿಗೆ ತರಲು ಕಾನೂನನ್ನು ಮಾಡುವದು ಸೇರಿದಂತೆ ಈ ಎಲ್ಲಾ ಅಂಶಗಳ ಮೇಲೆ ಈ ವ್ಯವಸ್ಥೆಯಲ್ಲಿ ಯಾವುದೇ ತೊಂದರೆಗಳನ್ನು ತಪ್ಪಿಸಲು ಇದನ್ನು ಮಾಡಲಾಗಿದೆ.

## ಒಕ್ಕೂಟ ಮತ್ತು ರಾಜ್ಯಗಳ (ಪ್ರಸ್ತುತ) ಸಮವರ್ತಿ ಶಾಸನೀಯ ಅಧಿಕಾರಗಳು :

ಸಂಯುಕ್ತ ಸಂವಿಧಾನಗಳಲ್ಲಿ ಕಂಡುಬರುವ ಸಹಕಾರಿ ಕಾರ್ಯ ತಂತ್ರಗಳು, ಸಮವರ್ತಿ ಪಟ್ಟಿಯ ಮೂಲಕ ಸಹಕಾರಿ ಕಾರ್ಯದ ಈ ತಂತ್ರದ ಮಹತ್ವವನ್ನು ಭಾರತದ ಸಂವಿಧಾನದಲ್ಲಿ ಹೆಚ್ಚು ಗುರುತಿಸಲಾಗಿದೆ. ಹಿಂದಿನ ಸಂವಿಧಾನಗಳಲ್ಲಿ ಸಮವರ್ತಿಪಟ್ಟಿಯಲ್ಲಿ ಸೇರಿಸಲಾದ ವಿಷಯಗಳ ಸಂಖ್ಯೆ ಕಡಿಮೆ ಇದ್ದವು. ಆದರೆ ಭಾರತದ ಸಂವಿಧಾನದಲ್ಲಿ ಅಂತಹ ೪೭ ವಿಷಯಗಳು ಇವೆ. ಈ ವಿಷಯಗಳನ್ನು ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾಗಿದ್ದು ಇದರಿಂದಾಗಿ ದೇಶಾದ್ಯಂತ ಏಕರೂಪದ ವಿನ್ಯಾಸ ಮತ್ತು ಕಾನೂನುಗಳ ಚೌಕಟ್ಟನ್ನು ಕಾಪಾಡಿಕೊಳ್ಳಬಹುದಾಗಿದೆ. ಪ್ರಮಾಣಿತ ಶಾಸನ ಮತ್ತು ಸಾಮಾನ್ಯ ಮಾನದಂಡಗಳನ್ನು ಜಾರಿಗೆ ತರಲು ಕೇಂದ್ರಕ್ಕೆ ಅಧಿಕಾರ ನೀಡಲಾಗಿದ್ದರಿಂದ ವಿವಿಧ ಸ್ಥಳೀಯ ಪರಿಸ್ಥಿತಿಗಳು ಮತ್ತು ಸನ್ನಿವೇಶಗಳ ವ್ಯವಸ್ಥೆಯಲ್ಲಿ ಅಂತಹ ಮಾನದಂಡವನ್ನು ಅನ್ವಯಿಸಲು ಘಟಕಗಳಿಗೆ ಅಧಿಕಾರವಿದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಸಾಮರಸ್ಯವನ್ನು ಉತ್ತೇಜಿಸಲು ಮತ್ತು ಸಂಘರ್ಷಗಳ ಸಾಧ್ಯತೆಯನ್ನು

ತಪ್ಪಿಸಲು ಸಮವರ್ತಿ–ಪಟ್ಟಿಯ ಶಾಸನೀಯ ಸದಸ್ಯರ ದೊಡ್ಡ ಪಟ್ಟಿಯನ್ನು ಲೆಕ್ಕ ಹಾಕಲಾಗಿದೆ ಎಂದು ಭಾವಿಸಲಾಯಿತು. ಸಮವರ್ತಿಪಟ್ಟಿಯ ೪೭ ವಿಷಯಗಳನ್ನು ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲ ವಿಭಾಗವು ಸಾಮಾನ್ಯ ಕಾನೂನು ಮತ್ತು ಕಾರ್ಯವಿಧಾನ, ಸಿವ್ಹಿಲ್ ಪ್ರೊಸಿಜರ್ ಮದುವೆ, ವಿಚ್ಛೇದನ, ಆಸ್ತಿಕಾನೂನು, ಒಪ್ಪಂದಗಳು ಇತ್ಯಾದಿಗಳಿಂದ ಮಾಡಲ್ಪಟ್ಟಿದೆ. ಎರಡನೇ ವಿಭಾಗದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಯೋಜನೆಗೆ ಸಂಬಂಧಿಸಿದ ವಿಷಯಗಳು ಸೇರಿವೆ. ಇವು ಇತರ ವಿಷಯಗಳ ನಡುವೆ ಸಾಮಾಜಿಕ ಕಲ್ಯಾಣ, ವ್ಯಾಪಾರ ಒಕ್ಕೂಟಗಳು, ಸಾಮಾಜಿಕ ಭದ್ರತೆ, ಕಾರ್ಮಿಕರ ವೃತ್ತಿಪರ ತರಬೇತಿಯನ್ನು ಒಳಗೊಂಡಿವೆ. ಕಾನೂನು, ವೈದ್ಯಕೀಯ ಮತ್ತು ಇತರ ವೃತ್ತಿಗಳು, ಬೆಲೆನಿಯಂತ್ರಣ, ಸ್ವಾಧೀನ ಮತ್ತು ಆಸ್ತಿಯ ಪರಭಾರೆ ಈ ವಿಷಯಗಳಲ್ಲಿ ರಾಷ್ಟ್ರವ್ಯಾಪಿ ಏಕರೂಪತೆಯ ಅಗತ್ಯವಿರುವಾಗ ಸಂಸತ್ತು ಸಮವರ್ತಿ ಪಟ್ಟಿಯ ವಿಷಯಗಳಲ್ಲಿ ಶಾಸನ ರಚಿಸಬಹುದು. ಸಂಸದೀಯ ಶಾಸನದ ಅನುಪಸ್ಥಿತಿಯಲ್ಲಿ, ರಾಜ್ಯಗಳು ಸಮವರ್ತಿ ವಿಷಯಗಳಲ್ಲಿ ಶಾಸನ ಮಾಡಬಹುದು. ಯಾವುದೇ ಪ್ರಸ್ತುತ ವಿಷಯಗಳಲ್ಲಿ ಸಂಸತ್ತು ಕಾನೂನುಗಳನ್ನು ಜಾರಿಗೆ ತಂದಾಗಲೂ ಸಹ, ಸಮವರ್ತಿ ಪಟ್ಟಿಯಲ್ಲಿನ ನಿರ್ದಿಷ್ಟ ವಿಷಯ, ರಾಜ್ಯಗಳು, ಸಂಸತ್ತು ಅಂಗೀಕರಿಸಿದ ಕಾನೂನಿಗೆ ಪೂರಕವಾದ ಕಾನೂನುಗಳನ್ನು ರಚಿಸಬಹುದು.

## ಹಣಕಾಸಿನ ವಿಷಯಗಳಲ್ಲಿ ಸಹಕಾರ:

### ಕೇಂದ್ರ ಮತ್ತು ರಾಜ್ಯಗಳ ನಡುವೆ ಹಣಕಾಸಿನ ಅಧಿಕಾರ ಹಂಚಿಕೆ

ಕೇಂದ್ರ ಮತ್ತು ರಾಜ್ಯಗಳ ನಡುವೆ ಹಣಕಾಸಿನ ಅಧಿಕಾರಗಳ ಹಂಚಿಕೆ ಕೇಂದ್ರ ಮತ್ತು ರಾಜ್ಯಗಳಿಗೆ ಕ್ರಿಯಾತ್ಮಕ ಜವಾಬ್ದಾರಿಗಳನ್ನು ನಿರ್ವಹಿಸಲು ಅನುವು ಮಾಡಿಕೊಡುವ ಸಲುವಾಗಿ, ಭಾರತದ ಸಂವಿಧಾನವು ಆದಾಯ ಮತ್ತು ತೆರಿಗೆ ಅಧಿಕಾರವನ್ನು ಹಂಚಿಕೆ ಮಾಡಿದೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ತೆರಿಗೆ ವಿಧಿಸುವ ಅಧಿಕಾರವು ಶಾಸಕಾಂಗ ಅಧಿಕಾರಗಳಿಗೆ ಹೋಲುತ್ತದೆ. ಮೂರು ಪಟ್ಟಿಗಳ ಅಡಿಯಲ್ಲಿ ವಿಭಜಿಸಲಾಗಿದೆ.

೧) ಕೇಂದ್ರ ಪಟ್ಟಿ ಅಡಿಯಲ್ಲಿ ನಮೂದಿಸಲಾದ ಯಾವುದೇ ತೆರಿಗೆ ಅಥವಾ ಸುಂಕವನ್ನು ವಿಧಿಸಲು ಕೇಂದ್ರಕ್ಕೆ ವಿಶೇಷ ಹಣಕಾಸು ಅಧಿಕಾರವಿದೆ.

೨) ಅಂತೆಯೇ ರಾಜ್ಯಪಟ್ಟಿ ಅಡಿಯಲ್ಲಿ ಬರುವ ಯಾವುದೇ ತೆರಿಗೆ ಅಥವಾ ಸುಂಕವನ್ನು ವಿಧಿಸಲು ರಾಜ್ಯಕ್ಕೆ ಅಧಿಕಾರವಿದೆ.

೩) ಸಮವರ್ತಿಯಲ್ಲಿ ಪಟ್ಟಿಯಲ್ಲಿ ಬರುವ ತೆರಿಗೆಗಳ ಕರ್ತವ್ಯಗಳ ವಿಷಯದಲ್ಲಿ ಕೇಂದ್ರ ಮತ್ತು ರಾಜ್ಯಗಳು ಎರಡು ಸಮಾನ ಅಧಿಕಾರ ಹೊಂದಿವೆ.

೪) ಶೇಷಧಿಕಾರದ ಮೇಲೆ ತೆರಿಗೆ ವಿಧಿಸುವ ಅಧಿಕಾರ ಕೇಂದ್ರ ಸರಕಾರಕ್ಕೆ ಒದಗಿಸಲಾಗಿದೆ.

* ಕೇಂದ್ರಪಟ್ಟಿ ಅಡಿಯಲ್ಲಿ ಕೇಂದ್ರಕ್ಕೆ ನಿಗದಿಪಡಿಸಿರುವ ತೆರಿಗೆ ಮತ್ತು ಕರ್ತವ್ಯಗಳು ಹೀಗಿವೆ.

೧) ಕೃಷಿ ಆದಾಯವನ್ನು ಹೊರತುಪಡಿಸಿ ಆದಾಯದ ಮೇಲಿನ ತೆರಿಗೆಗಳು.

೨) ರಫ್ತು ಸುಂಕ ಸೇರಿದಂತೆ ಕಸ್ಟಮ್ಸ್

೩) ತಂಬಾಕು ಮತ್ತು ಇತರೆ ಸರಕುಗಳ ಮೇಲಿನ ಅಬಕಾರಿ ಕರ್ತವ್ಯಗಳನ್ನು ಹೊರತುಪಡಿಸಿ ಭಾರತದಲ್ಲಿ ಉತ್ಪಾದಿಸಲಾಗುತ್ತದೆ.

ಎ) ಮಾನವ ಬಳಕೆಗಾಗಿ ಆಲ್ಕೋಹಾಲುಯುಕ್ತ ಮದ್ಯಗಳು.

ಬಿ) ಅಫೀಮು, ಭಾರತೀಯ ಸೆಣಬಿನ ಮತ್ತು ಇತರ ಮಾದಕ ವಸ್ತುಗಳು.

೪) ಕರ್ಪೋರೇಟ ತೆರಿಗೆ

೫) ಆಸ್ತಿಗಳ ಬಂಡವಾಳ ಮೌಲ್ಯದ ಮೇಲಿನ ತೆರಿಗೆಗಲು, ಕೃಷಿ ಭೂಮಿಯನ್ನು ಹೊರತುಪಡಿಸಿ ವ್ಯಕ್ತಿಗಳು ಮತ್ತು ಸಮುದಾಯಗಳು.

೬) ಕೃಷಿ ಭೂಮಿಯನ್ನು ಹೊರತುಪಡಿಸಿ ಆಸ್ತಿಯ ಮೇಲಿನ ಎಸ್ಟೇಟ್ ಸುಂಕ.

೭) ರೈಲ್ವೆ, ಸಮುದ್ರ ಅಥವಾ ಗಾಳಿಯಿಂದ ಸಾಗಿಸುವ ಸರಕುಗಳು ಅಥವಾ ಪ್ರಯಾಣಿಕರ ಮೇಲಿನ ಟರ್ಮಿನಲ್ ತೆರಿಗೆಗಳು.

೮) ಕೃಷಿ ಭೂಮಿಯನ್ನು ಹೊರತುಪಡಿಸಿ ಇತರ ಆಸ್ತಿಗೆ ಅನುಕ್ರಮವಾಗಿ ಕರ್ತವ್ಯಗಳು.

೯) ವಿನಿಮಯ, ಚೆಕ್, ವಿಮೆಯ ಪಾಲಸಿಗಳು, ಷೇರುಗಳ ವರ್ಗಾವಣೆ ಡಿಬೆಂಚರ್ಸ್.

೧೦) ಸುಪ್ರೀಂಕೋರ್ಟ ಶುಲ್ಕಗಳು

### ರಾಜ್ಯಗಳಿಗೆ ಪ್ರತ್ಯೇಕವಾಗಿ ನಿಯೋಜಿಸಲಾದ ತೆರಿಗೆಗಳು ಮತ್ತು ಕರ್ತವ್ಯಗಳು :

೧) ಭೂ ಆದಾಯ.

೨) ಕೃಷಿ ಆದಾಯದ ಮೇಲಿನ ತೆರಿಗೆಗಳು

೩) ಕೃಷಿ ಇಂಧನಕ್ಕೆ ಅನುಕ್ರಮವಾಗಿ ಎಸ್ಟೇಟ್ ಸುಂಕ.

೪) ಜಮೀನುಗಳು ಮತ್ತು ಕಟ್ಟಡಗಳ ಮೇಲಿನ ತೆರಿಗೆಗಳು.

೫) ಖನಿಜ ಹಕ್ಕುಗಳ ಮೇಲಿನ ತೆರಿಗೆಗಳು ಯಾವುದೇ ಮಿತಿಗಳಿಗೆ ಒಳಪಟ್ಟಿರುತ್ತವೆ.

## ಸಮವರ್ತಿ ಪಟ್ಟಿಯ ತೆರಿಗೆಗಳು ಮತ್ತು ಕರ್ತವ್ಯಗಳು :

೧) ನ್ಯಾಯಾಂಗ ಸ್ಟಾಂಪ್ಸ್ ಮೂಲಕ ಸಂಗ್ರಹಿಸುವ ಕರ್ತವ್ಯಗಳು ಮತ್ತು ಶುಲ್ಕಗಳನ್ನು ಹೊರತುಪಡಿಸಿ ಸ್ಟ್ಯಾಂಪ್‌ಡ್ಯೂಟಿ ದರಗಳನ್ನು ಒಳಗೊಂಡಿಲ್ಲ.

೨) ಸಮವರ್ತಿ ಪಟ್ಟಿಯಲ್ಲಿ ಸೇರಿಸಲಾದ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಶುಲ್ಕಗಳು.

ಮೇಲಿನ ತೆರಿಗೆಗಳು ಮತ್ತು ಕರ್ತವ್ಯಗಳನ್ನು ವಿಧಿಸುವಲ್ಲಿ ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಘರ್ಷದ ಸಂದರ್ಭಗಳಲ್ಲಿ ಒಕ್ಕೂಟವು ಸರ್ವೋಚ್ಛವಾಗಿದೆ. ರಾಷ್ಟ್ರಪತಿಯವರು ಕೇಂದ್ರದ ಮೇಲಿನ ತೆರಿಗೆಗಳು ಮತ್ತು ಕರ್ತವ್ಯಗಳನ್ನು ವಿಧಿಸುವ ರಾಜ್ಯ ಶಾಸನವನ್ನು ಅವರ ಪರಿಗಣನೆಗೆ ಕಾಯ್ದಿರಿಸಲಾಗಿದೆ ಮತ್ತು ಯಾವುದೇ ಹೊಸ ಕಾನೂನಿನ ವಿರುದ್ಧ ಶಾಸನವನ್ನು ಅಂಗೀಕರಿಸುವ ಅಂತಿಮ ಅಧಿಕಾರವನ್ನು ಸಂಸತ್ತು ಹೊಂದಿದೆ.

ಸಾಲ ಪಡೆಯುವ ಅಧಿಕಾರಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತೆರಿಗೆ ಅಧಿಕಾರವನ್ನು ವಿಭಜಿಸುವುದರ ಜೊತೆಗೆ ಸಂವಿಧಾನವು ಸಾಲ ಪಡೆಯುವ ಅಧಿಕಾರವನ್ನು ವಿಶೇಷ ಆಧಾರದ ಮೇಲೆ ವಿತರಿಸುತ್ತದೆ.

## ಒಕ್ಕೂಟದಿಂದ ರಾಜ್ಯಗಳಿಗೆ ಆದಾಯದ ವರ್ಗಾವಣೆ :

ವಿಶೇಷ ಆಧಾರದ ಮೇಲೆ ತೆರಿಗೆಗಳು ಮತ್ತು ವಿತರಣೆಯ ಹೊರತಾಗಿ ಒಕ್ಕೂಟದಿಂದ ಆದಾಯವನ್ನು ರಾಜ್ಯಗಳಿಗೆ ವರ್ಗಾಯಿಸಲು ಸಂವಿಧಾನವು ಒದಗಿಸುತ್ತದೆ. ಒಕ್ಕೂಟದ ತೆರಿಗೆ ವ್ಯಾಪ್ತಿ ವಿಸ್ತಾರವಾಗಿದೆ ರಾಜ್ಯಗಳಿಗಿಂತ ಎರಡರಷ್ಟು ತೆರಿಗೆಯನ್ನು ತಪ್ಪಿಸಲು ಅಂತರ ರಾಜ್ಯ ಮೂಲವನ್ನು ಹೊಂದಿರುವ ತೆರಿಗೆಗಳನ್ನು ಸಮರ್ಥವಾಗಿ ಸಂಗ್ರಹಿಸಲು ಅನುವು ಮಾಡಿಕೊಡಲು ಕೇಂದ್ರದ ವ್ಯಾಪ್ತಿಗೆ ಒಳಪಡಿಸಲಾಗುತ್ತದೆ.

## ಉಪಸಂಹಾರ :

ಭಾರತದ ಸಂಯುಕ್ತ ವ್ಯವಸ್ಥೆಯ ಮುಖ್ಯವಾದ ಅಂಶವೆಂದರೆ ಅದರ ಸಹಕಾರಿ ಸಂಯುಕ್ತ ವ್ಯವಸ್ಥೆ ರಾಜ್ಯ ಮತ್ತು ಒಕ್ಕೂಟದ ನಡುವಿನ ಸ್ಪರ್ಧೆಯಲ್ಲಿ ನಿಕಟ ಸಹಯೋಗವನ್ನು ಉತ್ತೇಜಿಸಲು, "ಸಂವಿಧಾನವು ಸಹಕಾರಿ ಸಂಯುಕ್ತ ವ್ಯವಸ್ಥೆ ಎಂಬ ಕಲ್ಪನೆಯನ್ನು ಸಂಯೋಜಿಸುತ್ತದೆ. ಮತ್ತು ಈ ವ್ಯವಸ್ಥೆಯನು ್ನಕಾರ್ಯರೂಪಕ್ಕೆ ತರಲು ವಿವಿಧ ಸಾಧನಗಳನ್ನು ನಿರ್ದಿಷ್ಟಪಡಿಸುತ್ತದೆ. ಸಂವಿಧಾನದ ರಚನಾಕಾರರ ಪ್ರಕಾರ ಒಕ್ಕೂಟ ಮತ್ತು ರಾಜ್ಯಗಳ ನಡುವಿನ ಕ್ರಿಯಾತ್ಮಕ ಜವಾಬ್ದಾರಿಗಳು ಮತ್ತು ಅಧಿಕಾರಗಳ ನಡುವಿನ ವ್ಯತ್ಯಾಸವು ಅಪ್ರಯೋಗಿಕವಾಗಿದೆ. ಮತ್ತು ಸಾರ್ವಜನಿಕ ಕಾರ್ಯಗಳ ಸಹಕಾರದ ಕಾರ್ಯಕ್ಷಮತೆಗೆ ಅವಕಾಶವಿರಬೇಕು.

## ಆಧಾರ ಗ್ರಂಥಗಳು :

1. ಇಂಡಿಯಾಸ್ ಕೋಆಪರೇಟಿವ್ ಫೆಡರ್ಯಾಲಿಸಮ್ : ಡಾ. ಕೆ.ಎಚ್. ಚೆಲುವರಾಜು, ವಿನಾಯಕ ಪಬ್ಲಿಕೇಶನ್ಸ್, ಮೈಸೂರು, ೧೯೬೪
2. ಯೋಜನಾ ಫೆಬ್ರವರಿ ೨೦೧೫ (ಕನ್ನಡ ಆವೃತ್ತಿ)
3. ಚಂದ್ರಪಾಲ, ಸೆಂಟರ್–ಸ್ಟೇಟ್ ರಿಲೇಶನ್ಸ್ ಕೋ–ಆಪರೇಟಿವ್ ಫೆಡರ್ಯಾಲಿಸಮ್, ದೀಪ ಮತ್ತು ದೀಪ ಪಬ್ಲಿಕೇಷನ್ಸ್, ನ್ಯೂಡೆಲ್ಲಿ, ೧೯೮೩